**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**

**ದಕ್ಷಿಣ ಕನ್ನಡ, ಮಂಗಳೂರು.**

## ಸ್ಪೆಷಲ್ ಕೇಸ್ ನಂಬ್ರ 124/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಸ್. ಸಸಿಕಾಂತ್ ಸೆಂಥಿಲ್ | ಫ್ರಾಸಾಃ 4 |
| ತಂದೆಯ ಹೆಸರು | : | ಷಣ್ಮುಗಂ | ಚಾಸಾಃ 2 |
| ಪ್ರಾಯ | : | 43 ವರ್ಷ | **ದಿನಾಂಕಃ 17.12.2022** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ನಿವೃತ್ತ ಸರಕಾರಿ ನೌಕರ | |
| ವಾಸಸ್ಥಳ | : | ಬೆಂಗಳೂರು. | |

ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ

ನಾನು ದಿನಾಂಕ 19.10.2017 ರಿಂದ 03.09.2019 ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿನಾಂಕ 16.11.2018 ರ ಪತ್ರದ ಮೂಲಕ ಎ.ಸಿ.ಬಿ. ಎ.ಡಿ.ಜಿ.ಪಿ. ರವರು ನನ್ನ ಕಛೇರಿಗೆ ಪತ್ರ ಮತ್ತು ಪತ್ರದೊಂದಿಗೆ 187 ದಾಖಲೆಗಳನ್ನು ಕಳುಹಿಸಿ ಗೋವಿಂದ್ ನಾಯ್ಕ್, ಪ್ರಥಮ ದರ್ಜೆ ಸಹಾಯಕನನ್ನು ಪಿ.ಸಿ. ಕಾನೂನಿನ ಕಲಂ 13(1)(ಇ) ಸಹಕಲಂ 13(2), ಐಪಿಸಿ ಕಲಂ 201, 465, 468, 471 ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಪೂರ್ವಾನುಮತಿಯನ್ನು ಕೋರಿದ್ದರು.

3. ಗೋವಿಂದ್ ನಾಯ್ಕ್ ಈತನು ಬೆಳ್ತಂಗಡಿ ತಹಶೀಲ್ದಾರ್ ಕಛೇರಿಯಲ್ಲಿ ಪ್ರಥಮ ದರ್ಜೆ ಗುಮಾಸ್ತನಾಗಿ ಕಾರ್ಯನಿರ್ವಹಿಸುತ್ತಿದ್ದನು. ಆತನ ಮೇಲೆ ಶಿಸ್ತು ಕ್ರಮ ಜರುಗಿಸಲು ಮತ್ತು ಆತನನ್ನು ಸೇವೆಯಿಂದ ವಜಾಗೊಳಿಸುವ ಅಧಿಕಾರವನ್ನು ನಾನೇ ಹೊಂದಿದ್ದೆನು. ನಾನು ಪೊಲೀಸರು ಕಳುಹಿಸಿಕೊಟ್ಟಂತಹ 187 ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ಆ ರೀತಿ ಪರಿಶೀಲನೆ ಮಾಡಿದ ನಂತರ ಗೋವಿಂದ್ ನಾಯ್ಕ್ ಈತನು ತನ್ನ ಆದಾಯಕ್ಕಿಂತ ಹೆಚ್ಚಿನ ಆಸ್ತಿಗಳನ್ನು ಹೊಂದಿದ್ದನು ಎಂದು ಕಂಡು ಬಂದಿದ್ದರಿಂದ ನಾನು ಆತನನ್ನು ಅಭಿಯೋಜನೆಗೆ ಒಳಪಡಿಸಲು ದಿನಾಂಕ 29.01.2019 ರಂದು ಪೂರ್ವಾನುಮತಿಯನ್ನು ನೀಡಿರುತ್ತೇನೆ. ಆ ಆದೇಶದಲ್ಲಿ ನಾನು ಪರಿಶೀಲನೆ ಮಾಡಿದ ದಾಖಲೆಗಳ ವಿವರಗಳನ್ನು ನೀಡಿರುತ್ತೇನೆ. ಸಾಕ್ಷಿ ತಾನು ನೀಡಿದ ಪೂರ್ವಾನುಮತಿಯನ್ನು ನಿಶಾನೆ ಪಿ.5 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ 1 ಮತ್ತು 2 ನೇ ಆರೋಪಿತರ ಪರ ವಕೀಲರಿಂದಃ

4. 2 ನೇ ಆರೋಪಿ ಸಹ ಸರಕಾರದ ಸೇವೆಯಲ್ಲಿ ಇದ್ದಳು ಎಂಬುದು ನನ್ನ ಗಮನಕ್ಕೆ ಬಂದಿತ್ತು. ಅವಳು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಳು. ನಾನು ಪೂರ್ವಾನುಮತಿಯನ್ನು ನೀಡುವ ಪೂರ್ವದಲ್ಲಿ 2 ನೇ ಆರೋಪಿಯ ಕಛೇರಿಯ ಯಾವುದೇ ಅಧಿಕಾರಿಗಳನ್ನು ಸಂಪರ್ಕಿಸಿಲ್ಲ ಮತ್ತು

ಅವರಿಂದ ಯಾವುದೇ ದಾಖಲೆಗಳನ್ನು ನಾನು ಪಡೆದಿಲ್ಲ. 1 ನೇ ಆರೋಪಿ ಪೂರ್ವಾನುಮತಿ ಆದೇಶದಲ್ಲಿ ಕಾಣಿಸಿದಂತಹ 187 ರಲ್ಲಿರುವ ದಾಖಲೆಗಳನ್ನು ನಾನುಪರಿಗಣಿಸಿದ್ದೇನೆ. ಅದರಲ್ಲಿ 1 ನೇ ಆರೋಪಿ ತನ್ನ ಆಸ್ತಿಗಳ ವಿವರ, ಖರ್ಚಿನ ವಿವರ ಮತ್ತು ಆದಾಯದ ವಿವರಗಳನ್ನುಕಾಣಿಸಿದ್ದಾನೆ ಅಂದರೆ ಸರಿ. ಆ ವಿವರ ಮತ್ತು ಪೊಲೀಸರು ಅಂತಿಮ ವರದಿಯಲ್ಲಿ ಕಾಣಿಸಿದ ವಿವರಗಳಲ್ಲಿ ವ್ಯತ್ಯಾಸ ಇತ್ತೋ ಅಥವಾ ಇಲ್ಲವೋ ಎಂಬುದು ನೆನಪಿರುವುದಿಲ್ಲ. ನಾನು ಆ ಎರಡೂ ವಿವರಗಳನ್ನು ಪೂರ್ವಾನುಮತಿ ನೀಡುವ ಪೂರ್ವದಲ್ಲಿ ಪರಿಶೀಲಿಸಿದ್ದೇನೆ.

5. ಪೊಲೀಸರು ಕಳುಹಿಸಿದ ಅಂತಿಮ ವರದಿಯಲ್ಲಿ ಕಾಣಿಸಿದ ಆಸ್ತಿಗಳ ಮೌಲ್ಯ, ವೆಚ್ಚದ ಹಣ ಮತ್ತು ಆದಾಯದ ಪ್ರತೀಯೊಂದು ವಿವರಗಳ ಸತ್ಯಾಸತ್ಯತೆಯ ಕುರಿತು ನಾನು ಯಾವುದೇ ತನಿಖೆ ಮಾಡಿಲ್ಲ. ಪೊಲೀಸರು ನನಗೆ ಕಳುಹಿಸಿಕೊಟ್ಟಂತಹ ದಾಖಲೆಗಳಲ್ಲಿ ಮತ್ತು ಅಂತಿಮ ವರದಿಯಲ್ಲಿ ಕಾಣಿಸಿದ ಆಸ್ತಿಗಳ ಮೌಲ್ಯ, ಖರ್ಚಿನ ವಿವರ ಮತ್ತು ಆದಾಯದ ವಿವರಗಳು ಇದ್ದದ್ದನ್ನು ನಾನು ಯಥಾವತ್ತಾಗಿ ಕಂಡುಕೊಂಡಿದ್ದೇನೆ. ಏಕೆಂದರೆ ಆ ದಾಖಲೆಗಳು ಸರಿ ಎಂದು ನನಗೆ ಕಂಡು ಬಂದಿದ್ದವು. ನಾನು ದಾಖಲೆಗಳನ್ನು ಪರಿಶೀಲನೆ ಮಾಡುವಾಗ ಪೊಲೀಸರು ತಮ್ಮ ವರದಿಯಲ್ಲಿ ಆರೋಪಿಯ ಆಸ್ತಿಗಳ ಮೌಲ್ಯದಲ್ಲಿ ಮತ್ತು ಖರ್ಚಿನ ವಿವರಗಳಲ್ಲಿ ಹೆಚ್ಚಿನ ಮೊತ್ತ ಕಾಣಿಸಿದ್ದರು ಅಂದರೆ

ಸರಿಯಲ್ಲ. ತನಿಖಾಧಿಕಾರಿ ತಮ್ಮ ಅಂತಿಮ ವರದಿಯಲ್ಲಿ 1 ನೇ ಆರೋಪಿ ತೋರಿಸಿದಂತಹ ಕಾನೂನುಬದ್ಧವಾಗಿ ಪಡೆದ ಕೆಲ ಆದಾಯಗಳನ್ನು ಬಿಟ್ಟಿದ್ದನ್ನು ನಾನು ಪರಿಗಣಿಸಿಲ್ಲ ಅಂದರೆ ಸರಿಯಲ್ಲ.

6. ನಾನು ಪೊಲೀಸರು ಕಳುಹಿಸಿಕೊಟ್ಟಂತಹ 187 ದಾಖಲೆಗಳಲ್ಲಿ ಇದ್ದ ಅಂಕಿ ಅಂಶಗಳನ್ನು ನೋಡಿ ಆರೋಪಿಯ ಆಸ್ತಿಗಳ ಮೌಲ್ಯ ರೂ.1,22,70,857/- ಆಗಿತ್ತು ಮತ್ತು ಆದಾಯಕ್ಕಿಂತ ಹೆಚ್ಚಿಗೆ ಇರುವ ಆಸ್ತಿಗಳ ಮೌಲ್ಯ ರೂ.81,70,857/- ಆಗಿತ್ತು ಮತ್ತು ಅದರ ಶೇಕಡಾವಾರು 199.28 ಆಗಿತ್ತು ಎಂದು ಕಂಡುಕೊಂಡಿದ್ದೇನೆ. ನಾನು ಪೂರ್ವಾನುಮತಿಯನ್ನು ಕೊಡುವ ಪೂರ್ವದಲ್ಲಿ 1 ನೇ ಆರೋಪಿ ಹೊಂದಿದ ಆಸ್ತಿಗಳ ಒಟ್ಟು ಮೌಲ್ಯ ರೂ.1,22,70,857/- ಎಂದು ಕಂಡು ಬಂದಿದೆ. ಸಾಕ್ಷಿ ಮುಂದುವರಿದು ಈ ಮೌಲ್ಯ 1 ನೇ ಆರೋಪಿ ಮತ್ತು ಆತನ ಕುಟುಂಬದ ಆಸ್ತಿಗಳ ಮೌಲ್ಯ ಆಗಿರುತ್ತದೆ ಎಂದು ಹೇಳುತ್ತಾರೆ.

7. ನಿಪಿ.5 ರಲ್ಲಿ ಪುಟ ಸಂಖ್ಯೆ 9 ರಲ್ಲಿ ಕೊನೆಯ ಪ್ಯಾರಾದಲ್ಲಿ ತೋರಿಸಿದಂತಹ 09.10.1986 ರಿಂದ 22.12.2016 ರ ವರೆಗಿನ ಪರಿಶೀಲನಾ ಅವಧಿಯ ಒಟ್ಟು ಮೊತ್ತ ರೂ.88,54,127.33 ಏನು ಸೂಚಿಸುತ್ತದೆ ಎಂಬುದನ್ನು ಈಗ ಹೇಳಲು ಬರುವುದಿಲ್ಲ. ನಾನು ಪೂರ್ವಾನುಮತಿಯನ್ನು ಕೊಡುವಾಗ 1 ನೇ ಆರೋಪಿಯ ಆಸ್ತಿ, ಖರ್ಚು ಮತ್ತು ಆದಾಯದ ವಿವರಗಳನ್ನು ಮಾತ್ರ ಪರಿಗಣಿಸಿರುತ್ತೇನೆ. ನಾನು ಪೂರ್ವಾನುಮತಿಯನ್ನು ಕೊಡುವಾಗ 2 ನೇ ಆರೋಪಿಯ ಆದಾಯವನ್ನು

ಪರಿಗಣಿಸಿರುವುದಿಲ್ಲ. ಅವಳು ಕಾನೂನುಬದ್ಧವಾಗಿ ಪಡೆದ ಆದಾಯವನ್ನು ಪೂರ್ವಾನುಮತಿ ಕೊಡುವ ಪೂರ್ವದಲ್ಲಿ ಪರಿಗಣಿಸಬೇಕಾಗುತ್ತದೆ ಅಂದರೆ ಸರಿ. ಇಬ್ಬರೂ ಆರೋಪಿತರು ಹೊಂದಿದಂತಹ ಅಸಮರ್ಪಕ ಆಸ್ತಿಯ ಮೌಲ್ಯ ಎಷ್ಟಿತ್ತು ಎಂಬುದನ್ನು ನಾನು ಕಂಡುಕೊಂಡಿಲ್ಲ. 1 ನೇ ಆರೋಪಿ ತನ್ನ ಆದಾಯಕ್ಕಿಂತ ರೂ.38,54,204.27 ಅಸಮರ್ಪಕ ಆಸ್ತಿಗಳನ್ನು ಹೊಂದಿದ್ದನು ಮತ್ತು ಅದರ ಶೇಕಡಾವಾರು 47.52 ಇತ್ತು. 1 ನೇ ಆರೋಪಿ ತನ್ನ ಆದಾಯಕ್ಕಿಂತ ರೂ.81,70,857/- ಮೊತ್ತದ ಆಸ್ತಿಗಳನ್ನು ಹೆಚ್ಚಿಗೆ ಹೊಂದಿರಲಿಲ್ಲ ಅಂದರೆ ಸರಿ.

8. ಪೊಲೀಸರು ತಾವು ಕಳುಹಿಸಿದ ದಾಖಲೆಗಳೊಂದಿಗೆ ಪೂರ್ವಾನುಮತಿಯ ಕರಡು ಪ್ರತಿಯನ್ನು ಸಹ ಕಳುಹಿಸಿಕೊಟ್ಟಿದ್ದರು ಅಂದರೆ ಸರಿಯಲ್ಲ. ಅದನ್ನು ಆಧರಿಸಿ ನನ್ನ ಸಹಾಯಕರು ನಿಪಿ.5 ರಲ್ಲಿರುವ ಆದೇಶವನ್ನು ತಯಾರಿಸಿದ್ದರು ಮತ್ತು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಪರಿಶೀಲನೆ ಮಾಡದೆ ಯಾಂತ್ರಿಕವಾಗಿ ಮಂಜೂರಾತಿ ನೀಡಿದ್ದೇನೆ ಅಂದರೆ ಸರಿಯಲ್ಲ. ನಾನು ಪೂರ್ವಾನುಮತಿಯನ್ನು ನೀಡುವ ಪೂರ್ವದಲ್ಲಿ 1 ನೇ ಆರೋಪಿಯ ಆಸ್ತಿಗಳ ಮೌಲ್ಯ ಎಷ್ಟು, ವೆಚ್ಚ ಎಷ್ಟು ಮತ್ತು ಆದಾಯ ಎಷ್ಟು ಎಂಬುದನ್ನು ಸರಿಯಾಗಿ ಕಂಡುಕೊಂಡಿಲ್ಲ ಅಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.